Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ಪಿ.ಆರ್/ 125 /2022-23 ದಿನಾಂಕ : 21-6-2022

ದಿನಾಂಕ: 18-06-2022 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ಸಿ.ಲಿಂಗರಾಜೇಗೌಡ | ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್ ಸಂಖ್ಯೆ:143 | 9480688143 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ವಿ.ವಿ.ಪುರಂ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | |
| 6 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 7 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |
| 8 | ಪಾರ್ವತಿಪುರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | |
| 8 | ವಿಜಯ್ ಕುಮಾರ್.ಕೆ.ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು (ಪ್ರ) | 9738721476 |
| 9 | ಶ್ರೀ.ವಿ. ಸುರೇಶ್ | ಎ.ಎಸ್.ಐ, ವಿ.ವಿ.ಪುರಂ ಸಂಚಾರ ಪೊಲೀಸ್ ಠಾಣೆ | 9738272397 |
| 10 | ಎಸ್.ಹೇಮಂತ್ ಕುಮಾರ್ | ಸ.ಅ.(ವಿದ್ಯುತ್) ಬೆಸ್ಕಾಂ ವಿ.ವಿ.ಪುರಂ | 9449870535 |
| 11 | ಶ್ರೀ.ಟಿ.ಆಂಜನೇಯ | ಹಿರಿಯ ಆರೋಗ್ಯ ಪರಿವೀಕ್ಷಕರು | |

ದಿನಾಂಕ 18-06-2022 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಮು.ತಿ.ನೋ

ಮೊದಲಿಗೆ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ.ಓ.ವಿ.ಜಯಕುಮಾರ್ ರವರು ಮಾತನಾಡಿ ಈ ಕೆಳಕಂಡ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ವಹಿಸುವಂತೆ ಕೋರಿದರು. ಅವುಗಳೆಂದರೆ

1. ಹಸಿಕಸಿ ಮತ್ತು ಒಣಕಸವನ್ನು ವಿಂಗಡಿಸಿಕೊಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ಕಾರ್ಯಕ್ರಮ ಮಾಡುವುದು.
2. ಪಾರಿವಾಳಗಳಿಗೆ ಆಹಾರ ಧಾನ್ಯಗಳನ್ನು ಹಾಕುತ್ತಿರುವ ಐಲ್ಯಾಂಡ್‌ನ್ನು ತೆರವುಗೊಳಿಸುವುದು.
3. ಬೀಡಾಡಿ ಹಸುಗಳ ಬಗ್ಗೆ ಕ್ರಮ ವಹಿಸುವುದು.
4. ಆರ್.ವಿ. ರಸ್ತೆ ಸ್ಯಾರಿ ಹೌಸ್ ಮುಂಭಾಗ ನೀರು ನಿಲ್ಲುತ್ತಿದ್ದು ಸರಾಗವಾಗಿ ಹರಿಯುವಂತೆ ಮಾಡುವುದು.
5. ಡಯಾಗನಲ್ ರಸ್ತೆ ಮತ್ತು ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ರಸ್ತೆಗಳಲ್ಲಿ Strips ಗಳನ್ನು ಅಳವಡಿಸುವುದು

ಮಾನ್ಯ ನೋಡಲ್ ಅಧಿಕಾರಿಗಳು ಈ ಎಲ್ಲಾ ವಿಷಯಗಳ ಸಂಬಂಧ ಕಿರಿಯ ಆರೋಗ್ಯ ಪರಿವೀಕ್ಷಕರು, ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು ಮತ್ತು ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಅಧಿಕಾರಿಗಳೊಂದಿಗೆ ಸಮನ್ವಯಂತೆ ಸಾಧಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ರಾಜು ರವರು ಮಾತನಾಡಿ ಈ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು. ಅವುಗಳೆಂದರೆ:-

1. ಆರ್.ವಿ.ರಸ್ತೆಯ ಟೀಚರ್ಸ್ ಕಾಲೇಜ್ ಬಳಿ ಬಸ್ ಶೆಲ್ಟರ್ ಅನ್ನು ನಿರ್ಮಿಸುವುದು.
2. ಬಸವನಗುಡಿ ವ್ಯಾಪ್ತಿಯಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಹಾಕುವುದು.
3. ಶ್ರೀರಾಮ ಮಂದಿರ ರಸ್ತೆಯ ಕನರ್‌ವೆನ್ಸಿಯಲ್ಲಿರುವ ಹಸುಗಳ ಶೆಡ್ ಅನ್ನು ತೆರವುಗೊಳಿಸುವುದು.
4. ಸರ್ವೆಯರ್ ರಸ್ತೆ ಕನ್ಸರ್‌ವೆನ್ಸಿಯಲ್ಲಿರುವ "ನಾನ್‌ವೆಜ್" ಹೋಟೆಲ್ ನ್ನು ತೆರವುಗೊಳಿಸುವುದು.
5. ಬಿ.ಪಿ.ವಾಡಿಯ ರಸ್ತೆ ಮತ್ತು ಬಾಂಬೆ ಹೌಸ್ ಮುಂಭಾಗದಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು.
6. ಸೋಮಶೇಖರ್ ನಂ. 90, ಸರ್ವೆಯರ್ ರಸ್ತೆಯಲ್ಲಿ ನಿರ್ಮಿಸಿರುವ ಕಟ್ಟಡದ ಬಗ್ಗೆ ಕ್ರಮ ವಹಿಸುವುದು.

ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಚರ್ಚಿಸಿ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಪಶುಸಂಗೋಪನಾ ಇಲಾಖೆ, ಆರೋಗ್ಯವೈದ್ಯಾಧಿಕಾರಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಆರೋಗ್ಯವೈದ್ಯಾಧಿಕಾರಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು.

ನಂತರದಲ್ಲಿ ವಿ.ವಿ.ಪುರಂ ಸಂಚಾರ ಪೋಲೀಸ್ ಠಾಣೆಯ ಶ್ರೀ. ಸುರೇಶ್ ಎ.ಎಸ್.ಐ ರವರು ಮಾತನಾಡಿ ಶಿವಶಂಕರ್ ವೃತ್ತದ ಬಳಿ ನೀರು ಶೇಖರಣೆಯಾಗುತ್ತಿರುವುದನ್ನು ಸರಿಪಡಿಸುವುದು ಮತ್ತು ಆರ್.ವಿ.ರಸ್ತೆ ವಾಣಿವಿಲಾಸ ರಸ್ತೆ ಹಾಗೂ ವಾಸವಿ ದೇವಸ್ಥಾನದ ರಸ್ತೆಗಳಲ್ಲಿನ ಮರಗಳನ್ನು ಹಾಕಿರುವ ಒ.ಎಫ್.ಸಿ. ಕೇಬಲ್‌ಗಳನ್ನು ತೆರವುಗೊಳಿಸಬೇಕೆಂದು ಕೋರಿದರು. ಮಾನ್ಯ ನೋಡಲ್ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸುವಂತೆ ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು.

ಪು.ತಿ.ನೋ

ನಂತರ ಪಾರ್ವತಿಪುರಂ ಶ್ರೀ ಮಧುಸೂದನ್ ರವರು ಮಾತನಾಡಿ ಬಸಪ್ಪ ವೃತ್ತದಿಂದ ಶಿವಶಂಕರ್ ವೃತ್ತದವರೆಗೆ ಬೀದಿ ದೀಪಗಳನ್ನು ಹಾಕುವುದು, ಸಜ್ಜನ್‌ರಾವ್ ರಸ್ತೆಯಲ್ಲಿ Road Strips ಗಳನ್ನು ಹಾಕುವುದು ಎಂದು ಕೋರಿದರು. ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳನ್ನು ಸೂಕ್ತ ಕ್ರಮ ವಹಿಸುವಂತೆ ಕೋರುವುದಾಗಿ ತಿಳಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –143 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)